# ವಿದ್ಯಾವರ್ಧಕ ಕಾನೂನು ಕಾಲೇಜು, ,ಮೈಸೂರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮೈಸೂರು ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿ, ಹುಣಸೂರು ಇವರ ಸಹಯೋಗದಲ್ಲಿ ಒಂದು ದಿನದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದ ಅಡಿಯಲ್ಲಿ ಮನೆ ಮನೆ ಸಮೀಕ್ಷೆ ವರಧಿ 2022-23 ದಿನಾಂಕ: 30-06-2023

---

**ಒಂದು ದಿನದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದ ಸಮಗ್ರ ವರಧಿ.**

ದಿನಾಂಕ 30-06-2023 ರಂದು ನಮ್ಮ ಕಾಲೇಜಿನ ಮೂರು ವರ್ಷದ ಮತ್ತು ಐದು ವರ್ಷದ ಅಂತಿಮ ಕಾನೂನು ವಿದ್ಯಾರ್ಥಿಗಳು ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹನಗೂಡು ಹೋಬಳಿ, ಯಶೋಧರಪುರ ಗ್ರಾಮದಲ್ಲಿ ಒಂದು ದಿನದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕಾಗಿ ಎಲ್ಲಾ ಅಂತಿಮ ವರ್ಷದ ವಿದ್ಯಾರ್ಥಿಗಳು ಬೆಳಿಗ್ಗೆ ಸುಮಾರು 9-30 ಕ್ಕೆ ಕಾಲೇಜಿನ ಆವರಣದಿಂದ ಸಂಸ್ಥೆಯ ಎರಡು ಬಸ್ಸುಗಳಲ್ಲಿ ತಲಾ ಒಂದೊಂದು ಬಸ್ಸಿನಲ್ಲಿ 65 ವಿದ್ಯಾರ್ಥಿಗಳಂತೆ 130 ವಿದ್ಯಾರ್ಥಿಗಳು ಯಶೋಧರಪುರ ಗ್ರಾಮಕ್ಕೆ ಸುಮಾರು 10-30 ಕ್ಕೆ ತಲುಪಿದೆವು. ಎಲ್ಲಾ ವಿದ್ಯಾರ್ಥಿಗಳು ಗ್ರಾಮವನ್ನು ತಲುಪಿದ ತಕ್ಷಣ 130 ವಿದ್ಯಾರ್ಥಿಗಳನ್ನು ಏಳು ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಈ ರೀತಿ ಗುಂಪುಗಳನ್ನಾಗಿ ಮಾಡಿದ ಮೇಲೆ ಪ್ರತೀ ವಿದ್ಯಾರ್ಥಿಗೆ ಕನಿಷ್ಠ ಮೂರು ಮನೆಗಳಂತೆ ಊರಿನ ಒಟ್ಟು 300 ಮನೆಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಯಿತು. ತದನಂತರ ಎಲ್ಲಾ ವಿದ್ಯಾರ್ಥಿಗಳು ಆವರವರಿಗೆ ನಿಗದಿಮಾಡಿದ್ದ ಮನೆಗಳಿಗೆ ತೆರಳಿ ಕುಟುಂಬಗಳ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಗಳನ್ನು ಮಾಡಿ ಒಂದು ಸಮಗ್ರವಾದ ವರಧಿಯನ್ನು ತಯಾರಿಸಿದರು ಮತ್ತು ವರಧಿ ವಿವವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಿವರ | ಸಂಖ್ಯೆ |
|---|---|---|
| 1. | ಗ್ರಾಮದಲ್ಲಿರುವ ಒಟ್ಟು ಜನ ಸಂಖ್ಯೆ | 1380 |
| 2. | ಒಟ್ಟು ಪುರುಷರ ಸಂಖ್ಯೆ. | 670 |
| 3. | ಗ್ರಾಮದಲ್ಲಿರುವ ಒಟ್ಟು ಮಹಿಳೆಯರ ಸಂಖ್ಯೆ. | 710 |
| 4. | ಒಟ್ಟು ಮತದಾರ ಸಂಖ್ಯೆ. | 1102 |
| 5. | ಪುರುಷ ಮತದಾರರು | 470 |
| 6. | ಮಹಿಳಾ ಮತದಾರರು. | 632 |
| 7. | 1 ರಿಂದ 18 ವರ್ಷ ವಯೋಮಾನದವರ ಸಂಖ್ಯೆ | 278 |
| 8. | ಪುರುಷರು | 128 |
| 9. | ಮಹಿಳೆಯರು | 150 |
| 10. | ಮತದಾನದ ಗುರುತಿನ ಚೀಟಿ ಇಲ್ಲದವರ ಸಂಖ್ಯೆ. | 65 |
| 11. | ಬ್ಯಾಂಕಿನ ಖಾತೆ ಹೊಂದಿರುವವರ ಸಂಖ್ಯೆ. | 700 |

| | | |
|---|---|---|
| 12. | ಪಾನ್ ಕಾರ್ಡ್ ಹೊಂದಿರುವವರ ಸಂಖ್ಯೆ. | 528 |
| 13. | ವೃದ್ಧಾಪ್ಯ ವೇತನ ಪಡೆಯುತ್ತಿರುವವರ ಸಂಖ್ಯೆ. | 70 |
| 14. | ಅರ್ಹತೆ ಇದ್ದು ವೃದ್ಧಾಪ್ಯ ವೇತನ ಪಡೆಯುತ್ತಿಲ್ಲದವರ ಸಂಖ್ಯೆ | 40 |
| 15. | ವಿಧವಾ ವೇತನ ಪಡೆಯುತ್ತಿರುವವರ ಸಂಖ್ಯೆ. | 31 |
| 16. | ಅರ್ಹತೆ ಇದ್ದು, ಪಡೆಯದೇ ಇರುವವರು. | 06 |
| 17. | ಮನಸ್ವಿ ವೇತನ ಪಡೆಯುತ್ತಿರುವವರು | 05 |
| 18. | ಮನಸ್ವಿ ವೇತನ ಪಡೆಯದೇ ಇರುವವರು. | 03 |
| 19. | ಅಂಗ ವಿಕಲ ವೇತನ ಪಡೆಯುತ್ತಿರುವವರು | 09 |
| 20. | ಅರ್ಹತೆ ಇದ್ದು ಪಡೆಯದೇ ಇರುವವರು | 07 |
| 21. | ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ಪಡೆದಿರುವವರ ಸಂಖ್ಯೆ. | 209 |
| 22. | ಯಶಸ್ವಿನಿ ಕಾರ್ಡ್ ಹೊಂದಿರುವರ ಸಂಖ್ಯೆ. | 96 |
| 23. | ಸ್ವಂತ ಮನೆ ಹೊಂದಿರುವವರು. | 286 |
| 24. | ಸ್ವಂತ ಮನೆ ಇಲ್ಲದವರು. | 25 |
| 25. | ಕುಡಿಯವ ನೀರಿನ ಸಂಪರ್ಕ ಹೊಂದಿರುವ ಮನೆಗಳು. | 291 |
| 26. | ಕೃಷಿ ಭೂಮಿ ಹೊಂದಿರುವ ಕುಟುಂಬಗಳು. | 60 |
| 27. | ಕೃಷಿ ಭೂಮಿ ಹೊಂದಿಲ್ಲದೇ ಇರುವ ಕುಟುಂಬಗಳು. | 188 |
| 28. | ಕೃಷಿ ಉದ್ದೇಶಕ್ಕಾಗಿ ಬಳಸಲಾಗುತ್ತಿರುವ ಎತ್ತುಗಳ ಸಂಖ್ಯೆ. | 28 |
| 29. | ಹಸುಗಳ ಸಂಖ್ಯೆ. | 66 |
| 30. | ಆಡು/ಕುರಿಗಳ ಸಂಖ್ಯೆ. | 360 |
| 31. | ದ್ವಿ. ಚಕ್ರ ವಾಹನ | 129 |
| 32. | ಕಾರು | 06 |
| 33. | ಟ್ರ್ಯಾಕ್ಟರ್ | 05 |
| 34. | ಬೈಸಿಕಲ್ | 16 |
| 35. | ಸಿವಿಲ್ ದಾವೆಗಳು. | 12 |
| 36. | ಕ್ರಿಮಿನಲ್ ದಾವೆಗಳು. | 02 |
| 37. | ಆರೋಗ್ಯದ ಸಮಸ್ಯೆ | 38 |

ಗ್ರಾಮದ ಸರ್ವೆ ಕೆಲಸ ಮುಗಿದ ಮೇಲೆ ಎಲ್ಲಾ ವಿದ್ಯಾರ್ಥಿಗಳು ಒಂದು ಕಡೆ ಸೇರಿಕೊಂಡು ಒಂದು ಕ್ರೋಢಿಕೃತ ವರಧಿಯನ್ನು ಸಿದ್ದ ಮಾಡಿಕೊಂಡರು. ನಂತರ ವಿದ್ಯಾರ್ಥಿಗಳು ಮದ್ಯಾಹ್ನದ ಊಟವನು ಮಾಡಿಕೊಂಡು ಸಂಸ್ಥೆಯ ಎರಡು ಬಸ್ಸುಗಳಲ್ಲಿ ಮೈಸೂರಿಗೆ ಪ್ರಯಾಣ ಬೆಳೆಸಿದರು. ದಿನಾಂಕ: 01-07-2023 ರಂದು ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು, ವಿದ್ಯಾವಿಕಾಸ ಕಾನುನು ಅಧ್ಯಯನ ಸಂಸ್ಥೆ, ಮೈಸೂರು, ಎಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಮತ್ತು ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಅರಸೀಕೆರೆ ಇವರ ಸಹಯೋಗದಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ಗೌರವಾನ್ವಿತ ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್ ಮುದಗಲ್, ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು ಉದ್ಘಾಟಿಸಿದರು ಹಾಗೂ ಗೌರವಾನ್ವಿತ ನ್ಯಾಯಾದೀಶರು ಶ್ರೀ ಜಿ.ಎಸ್. ಸಂಗ್ರೇಶಿ

ಪ್ರಧಾನ ಜಿಲ್ಲಾನ್ಯಾಯಾದೀಶರು, ಮೈಸೂರು ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸರ್ವೆ ವರಧಿಯನ್ನು ಮಂಡಿಸಲಾಯಿತು ಮತ್ತು ವರಧಿಯ ಆಧಾರದ ಮೇಲೆ ಕ್ರಮ ವಹಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಎನ್.ಎಸ್. ಎಸ್. ವಿಶೇಷ ವಾರ್ಷಿಕ ಶಿಬಿರವನ್ನು ಗೌರವಾನ್ವಿತ ಶ್ರೀಮತಿ ಕೆ.ಎಸ್ ಮುದಗಲ್, ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚನ್ಯಾಯಾಲಯ, ಮತ್ತು ಗೌರವಾನ್ವಿತ ನ್ಯಾಯಾದೀಶರು ಶ್ರೀ ಜಿ.ಎಸ್. ಸಂಗ್ರೇಶಿ ಪ್ರಧಾನ ಜಿಲ್ಲಾನ್ಯಾಯಾದೀಶರು, ಮೈಸೂರು ಇವರು

ಉದ್ಘಾಟಿಸಿದರು.



ಗೌರವ ಕಾರ್ಯದರ್ಶಿಗಳಾದ ಶ್ರೀ ಪಿ ವಿಶ್ವನಾಥ್ ರವರು ಕಾರ್ಯಕ್ರಮವನ್ನು ವೀಕ್ಷಣೆ ಮಾಡುತ್ತಿರುವ ದೃಶ್ಯ.




ಮಹಾತ್ಮ ಗಾಂಧಿ ಜೀವನ ಆಧಾರಿತ ಚಿತ್ರಗಳನ್ನು ಗೌರವಾನ್ವಿತ ಶ್ರೀಮತಿ ಕೆ.ಎಸ್ ಮುದಗಲ್, ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚನ್ಯಾಯಾಲಯ, ವೀಕ್ಷಣೆ ಮಾಡುತ್ತಿರುವುದು.



ವಿದ್ಯಾರ್ಥಿಗಳು ಮನೆ ಮನೆ ಸರ್ವೆ ಕಾರ್ಯದಲ್ಲಿ ತೊಡಗಿಕೊಂಡಿರುವ ಒಂದು ದೃಶ್ಯ.



ಅಂತಿಮ ವರ್ಷದ ವಿದ್ಯಾರ್ಥಿಗಳು ಗ್ರಾಮಸ್ಥರ ಜೊತೆಯಲ್ಲಿ ಸಂವಾದದಲ್ಲಿ ತೊಡಗಿರುವುದು.



ವಿದ್ಯಾರ್ಥಿಗಳು ಮನೆಯ ಮುಖಂಡರಿಂದ ಅಗತ್ಯ ಮಾಹಿತಿಯನ್ನು ಕಲೆಹಾಕುತ್ತಿರುವುದು.



ಕಾನೂನು ಅರಿವು ಮತ್ತು ನೆರವು ಘಟಕದ ಸಂಯೋಜಕರಾದ ಶ್ರೀ ಎಚ್.ಎಸ್. ಶಿವಕುಮಾರ ರವರು ಮಾಹಿತಿ ಕಲೆಹಾಕುವುದನ್ನು ವೀಕ್ಷಣೆ ಮಾಡುತ್ತಿರುವ ದೃಶ್ಯ.

**H.S. Shivakumara,**
**Co.ordinator, SC & ST Cell,**
**VVLC, Mysuru.**